ಮದೂರು ತಾಲ್ಲೂಕಿನಲ್ಲಿ ಸಬ್-ಸ್ಟೇಷನ್.

970(1390) ಶ್ರೀ ಎಂ. ಮಹೇಶ್ ಚಂದ್ (ಮದ್ದೂರು) :— ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಮದ್ದೂರು ತಾಲ್ಲೂಕು ಒಂದು ದೊಡ್ಡ ತಾಲ್ಲೂಕು ಆಗಿರುವುದರಿಂದ ಈಗಿರುವ ಒಂದು ಸಬ್-ಸ್ಟೇಷನ್ ಜೊತೆಗೆ ಮತ್ತೊಂದು ಸಬ್-ಸ್ಟೇಷನ್‌ಗೆ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಇದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವರೇ? ಹಾಗಿದ್ದಲ್ಲಿ ಇದನ್ನು ಸ್ಥಾಪಿಸಲು ಕ್ರಮ ಕೈಗೊಳ್ಳುವರೇ?

ಆ)ಮದ್ದೂರಿನಲ್ಲಿದ್ದ ಸ್ಟೋರ್ ಪರ್ಚೇಸನ್ನು ಮಂಡ್ಯಕ್ಕೆ ವರ್ಗಾಯಿಸಿದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?

ಇ) ಮಂಡ್ಯಕ್ಕೆ ವರ್ಗಾಯಿಸಿದ ಸ್ಟೋರ್ ಪರ್ಚೇಸ್‌ನ್ನು ಪುನಃ ಮದ್ದೂರಿಗೆ ವರ್ಗಾಯಿಸಲು ಸರ್ಕಾರ ತೆಗೆದುಕೊಳ್ಳಲಿರುವ ಕ್ರಮಗಳೇನು?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) :—

ಅ) ಮದ್ದೂರು ತಾಲ್ಲೂಕಿನಲ್ಲಿ ಪ್ರಸ್ತುತ ಮೂರು ಉಪ ವಿದ್ಯುತ್ ಕೇಂದ್ರಗಳು -ಕೊಪ್ಪ, ಮದ್ದೂರು ಹಾಗೂ ದುಂಡನಹಳ್ಳಿಗಳಲ್ಲಿ- ಕಾರ್ಯನಿರ್ವಹಿಸುತ್ತಿದೆ. ಇದೇ ತಾಲ್ಲೂಕಿನ ಕೆ.ಎಂ. ದೊಡ್ಡಿಯಲ್ಲಿ ಸುಮಾರು 223 ಲಕ್ಷ ರೂ. ವೆಚ್ಚದಲ್ಲಿ 66 : 11 ಕೆ.ವಿ., 6.3 ಎಂ.ವಿ.ಎ. ಸಾಮರ್ಥ್ಯದ ಉಪ-ವಿದ್ಯುತ್ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿಯು ಪ್ರಗತಿಯಲ್ಲಿದೆ. ಈ ಕಾಮಗಾರಿಯನ್ನು ಅಕ್ಟೋಬರ್ 1999ರ ಅಂತ್ಯದ ವೇಳೆಗೆ ಪೂರ್ಣಗೊಳಿಸಲು ಉದ್ದೇಶಿಸಿದೆ.

ಆ) ಮದ್ದೂರಿನಲ್ಲಿ ಮಂಡಳಿಯ ಉಗ್ರಾಣವನ್ನು ಸಮೀಪದಲ್ಲಿನ ಮಂಡ್ಯದ ವಿಭಾಗೀಯ ಉಗ್ರಾಣದೊಂದಿಗೆ ವಿಲೀನಗೊಳಿಸಲಾಗಿದ್ದು, ಮದ್ದೂರು ಉಪ-ವಿಭಾಗದ ಸಾಮಗ್ರಿಗಳ ಅವಶ್ಯಕತೆಯನ್ನು ಮಂಡ್ಯದಿಂದಲೇ ಪೂರೈಸಲು ವ್ಯವಸ್ಥೆ ಮಾಡಲಾಗಿದೆ.

ಇ) ಉಪ-ವಿಭಾಗೀಯ ಕೇಂದ್ರಗಳಲ್ಲಿ ಸಾಮಗ್ರಿಗಳ ವಿತರಣೆಯನ್ನು ಉತ್ತಮಗೊಳಿಸುವುದು, ಹಾಲಿ ಇರುವ ಸಿಬ್ಬಂದಿಯನ್ನು ಮಂಡಳಿಯ ಇನ್ನಿತರ ಅತ್ಯವಶ್ಯಕ ಕಾರ್ಯಗಳಲ್ಲಿ ತೊಡಗಿಸುವುದು, ಇತ್ಯಾದಿ ಆಡಳಿತಾತ್ಮಕ ಅನುಕೂಲತೆಗಳಿಗಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಈ ವಿಲೀನದಿಂದಾಗಿ ಸಾರ್ವಜನಿಕರಿಗೆ ಒದಗಿಸುವ ಸೇವೆಯಲ್ಲಿ ಯಾವುದೇ ರೀತಿಯ ಕುಂದುಕೊರತೆಯೂ ಉಂಟಾಗದಂತೆ ಮಂಡಳಿಯು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿರುತ್ತದೆ. ಅಲ್ಲದೆ, ಈ ಉಗ್ರಾಣವನ್ನು ವಿಲೀನಗೊಳಿಸುವ ಮುನ್ನ ಈ ವಿಷಯವನ್ನು ಸಮಿಸ್ತಾರವಾಗಿ ಪರಿಶೀಲಿಸಿ, ವಿಲೀನಗೊಳಿಸಲು ತೀರ್ಮಾನವನ್ನು ತೆಗೆದುಕೊಳ್ಳಲಾಗಿದೆ. ಈ ಹಿನ್ನೆಲೆಯಲ್ಲಿ ಸದರಿ ಉಗ್ರಾಣವನ್ನು ಪುನಃ ಮದ್ದೂರಿಗೆ ವರ್ಗಾಯಿಸುವ ಪ್ರಶ್ನೆ ಸದ್ಯಕ್ಕೆ ಉದ್ಭವಿಸುವುದಿಲ್ಲ.